809

ಆಫಿಸಿನಲ್ಲಿ ಮೊಹರುದೆ ಟೆಂಡರ್‌ಗಳನ್ನು ತೆಗದುಕೊಳ್ಳಲ್ಪಡುತ್ತೆ. ಅಂದಾಜಾದಲ್ಲಿ ಕಂಡ ಬಾಬುವಾರ್ ಪೊತ್ತಗಳನ್ನು ಇದರಡಿ ನಮೂದಿಸಿಯಿದೆ. ಆದರೆ ಈ ಪೊತ್ತವು ಗೊತ್ತಾದ್ದಲ್ಲವು 1891ನೇ ಇಸವಿ ಡಿಸಂಬರ್ 31ರ ವಳಗಾಗಿ ಕೆಲಸವು ಪೂರೈಸ್‌ಕು.

2. ದಿವಿ 11 ಘಂಟೆ ಲಾಗಾಯತು 5 ಘಂಟೆ ವರಿಗೂ ಮೈಸೂರು ಡಿವಿಜ್ ಎಗ್ಜಿಕ್ಯೂಟಿವ್ ಇಂಜನಿಯರವರ ಆಫಿಸಿನಲ್ಲಿ ಇರುವ ನಬಾಸೆಗಳು ಮತ್ತು ತಪೇರ್‌ವಾರ್ ಅಂದಾಜಾ ಷರತ್ತುಗಳನ್ನು ನೋಡಬಹುದು.

3. ಇದಕ್ಕಾಗಿ ಛಾಪಿಸಿ ಇರುವ ಫಾರಂಗಳಲ್ಲಿ ಟೆಂಡರ್‌ಗಳನ್ನು ಬರದು ಕಳುಹಿಸಬೇಕು. ಅಂಥಾ ಫಾರಂಗಳು ಎಗ್ಜಿಕ್ಯೂಟಿವ್ ಇಂಜನಿಯವರ ಆಫಿಸಿನಲ್ಲಿ ದೊರಿಯುತ್ತದೆ. ಇದರಡಿ ನಮೂದಿಸಿ ಇರುವಂತೆ ಒಂದು ತಖ್ತೆ ತಯಾರ್ಮಾಡಿ ಆಯಾ ಬಾಬಿಗೆ ಯಾವ ದರದಂತೆ ಕೆಲಸ ನಡಿಸಲು ಇಷ್ಟವಿಧೆಯೋ ಅದನ್ನು ನಮೂದಿಸಿ ಟೆಂಡರ್ ವಡನೆ ರವಾನಿಸತಕ್ಕದ್ದು.

ಕೆಲಸಗಳ ವಿವರ.		ಪೊತ್ತ.	ದರ.
ಮಟ್ಟಿಕಾಮಗಾರಿ	ಸಲಗಜ.	4,700	
ಹಳೇಕಲ್ಲು ಕೆಲಸ, ...	..	1,288	
ಹೊಸಕಲ್ಲು ಕೆಲಸ	..	438	
ಡಿಟೋ	..	4,823	
ಹೆಪ್ಪುಕಟ್ಟು	ಚದರ	206.00	
ಗ್ರೆಡಿಕಲ್ಲುಗಳು	ವಂದಕ್ಕೆ	53	
ನಿಷಾನೀ ಕಲ್ಲು	...	1	
ತೂಬು ಕಾಮಗಾರಿ ಕೆಲಸ	ಒಟ್ಟು ಪೊತ್ತ		
ಕೋಡಿ ಕಾಮಗಾರೀ .. .	ಲಾಂಬಿ ಅಡಿ	240	

4. ಪ್ರತಿ ಟೆಂಡರ್ ವಡನೆ 100 ರೂಪಾಯಿಗಳು ನಗದಾಗಿ ಆಗಲಿ ವ ಗವರ್ಮೆಂಟ್ ಪ್ರೋನೋಟ್ಸ್ ಮೂಲಕವಾಗಿ ಆಗಲಿ ಸರ್ಕಾರದಲ್ಲಿ ಠೇವಣೀ ಇಡುವದಕ್ಕಾಗಿ ಹಾಜರ್ಮಾಡತಕ್ಕದ್ದು ಮತ್ತು ಆತಗೂರು ದೊಡ್ಡಕೆರೇ ರಸ್‌ಟೋರೇಷನ್ ಕಾಮಗಾರೀ ಟೆಂಡರ್ ಯೆಂದು ಮೇಲ್ ವಿಳಾಸ ಬರದು ಕಳುಹಿಸಬೇಕು. ಇವಕ್ಕೆ ತಪ್ಪಿದರೆ ಟೆಂಡರ್ ತಿರಸ್ಕರಿಸಲ್ಪಡುವದು.

5. ಟೆಂಡರ್‌ಯಾನೆ ದರಖಾಸ್ತು ಆಪೈರ್ ಮಂಜೂರಾತಿಯು ಚೀಫ್ ಇಂಜನಿಯರ್ ಸಾಹಬರವರಿಗೆ ಸೇರಿದ್ದಾಗಿ ಇಧೆ ದರಖಾಸ್ತು ಅಂಗೀಕರಿಸಿದ್ದಕ್ಕೆ ಆಗಲಿ ಅಥವಾ ತಿರಸ್ಕರಿಸಿದ್ದಕ್ಕೆ ಆಗಲಿ ಕಾರಣ ಕೊಡಲು ಬದ್ಧರಾಗಿ ಇರುವದಿಲ್ಲ.

6. ದರಖಾಸ್ತು ಮಂಜೂರಾದ 8 ದಿವಸಗಳ ವಳಗಾಗಿ ಚಡದರಖಾಸ್ತುದಾರನು ಕಂಟ್ರಾಕ್ಟು ಬಾಂಡು ಬರದುಕೊಡಬೇಕು. ಅದಕ್ಕೆ ತಪ್ಪಿದರೆ ಕಂಟ್ರಾಕ್ಟು ವಜಾ ಮಾಡಿ ಆಡ್ವಾನಸಾಗಿ ಕೊಟ್ಟು ಇದ್ದ ಠೇವಣೀ ಮೊಬಲಗನ್ನು ಸರಕಾರಕ್ಕೆ ಸೇರಿಸಲ್ಪಡುತ್ತೆ.

7. ಎಗ್ಜಿಕ್ಯೂಟಿವ್ ಇಂಜನಿಯರ್ ಸಾಹೆಬರವರ ಆಫಿಸ್ ನೋಟಿಸ್ ಬೋರ್ಡಿನ ಮೇಲೆ ಸರಿಯಾದ ಕಾಲದಲ್ಲಿ ಅಂಗೀಕರಿಸಿದ ಚಡದರಖಾಸ್ತುದಾರನ ಪೆಸರು ಪ್ರಕಟಿಸಲ್ಪಡುತ್ತೆ.

8. ಅವ್ಯರವಳಗಾಗಿ ದರಖಾಸ್ತು ಅಂಗೀಕರಿಸಿದ ವಿಷಯಕ್ಕಾಗಲಿ ಅಥವಾ ತಿರಸ್ಕರಿಸಿದ ವಿಷಯವೇ ಆಗಲಿ ತಿಳಿಯಲು ಬರದು ಕೊಂಡರೆ ಜವಾಬು ದೊರಿಯಲಾರದು.

9. ಯಾವದಾದರೂ ಒಂದು ದರಖಾಸ್ತು ಅಂಗೀಕರಿಸಿದ ತರುವಾಯ ತಿರಸ್ಕರಿಸಿದ ದರಖಾಸ್ತು ಸಂಗಡ ಕಳುಹಿಸಿದ ಡಿಪಾಜಿಟ್ ಮೊಬಲಗನ್ನು ವಾಪಸ್ ಮಾಡಲ್ಪಡುತ್ತೆ.

ವಿ. ಹೆಚ್. ಕರಿವ್,
ಎಗ್ಜಿಕ್ಯೂಟಿವ್ ಇಂಜನಿಯರ್.

ಹಾನನ ಡಿಸ್ಟ್ರಿಕ್ಟು.

1889ನೇ ಇಸವಿ 14ನೇ ಅಕ್ಟೋಬರ್.

ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಹಾನನ ಡಿಸ್ಟ್ರಿಕ್ಟು ಅರಕೇಕೆರೇ ತಾಲ್ಲೂಕಿನಲ್ಲಿ ಫಾರಂಗದ ಕಲ್ಲುಗಳನ್ನು ಜಮಾಯಿಸಿಕೊಳ್ಳತಕ್ಕ ಹಕ್ಕು ದಾರಿಯು ನರೇ ಅರಕೇಕೆರೇ ತಾಲ್ಲೂಕು ಕಛೇರಿಯಲ್ಲಿ ಸ್ಯ 1889ನೇ ಇಸವಿ ನವಂಬರ್ ತಾರೀಖು 15ನೇ ದಿವಿ 11 ಘಂಟೆಗೆ ಪ್ರಾರಂಭಿಸಿ ಬಹಿರಂಗವಾಗಿ ಹರಾಜ್ ಮಾಡಲ್ಪಡುವದು.

2. ಅಮಲ್‌ದಾರ್ರು ಅಥವಾ ತಿರಸ್ತೇದಾರ್ರು ಹರಾಜ್ ಮಾಡಿಸುವರು.

3. ಈ ಹರಾಜಿನ ಚೀಡರಬಾಸ್ತ ಹಾರ್ಸ ಡಿಸ್ಟ್ರಿಕ್ಟ್ಸು ಡೆಪ್ಯೂಟಿ ಕಮ್ಮಿಷನರವರಿಂದ ಹರಾಜ್ ಮಂಜೂರ್ಮಾಡಲ್ಪಡುವ ತರಿಯಂತರ ಕಾಯಮಾದ್ದಾಗಿ ತಿಳಿದು ಕೊಳ್ಳಕೂಡದು.

4. ಈ ಯಿಜಾರೆಯು ಸ್ನ 1890ನೇ ಇಸವಿ ಮಾರ್ಚಿ 31ರ ವರಿಗೆ ಜಾರಿಯಲ್ಲಿ ಯಿರತಕ್ಕದ್ದು.

5. ಕ್ರಯದಾರನು ಹರಾಜ್‌ಕಾಲದಲ್ಲಿ ಕ್ರಯದ ಮೊಬಲಗು ಪೈಕಿ ಕೇಕಡಾ 25 ರೂಪಾಯಿನಂತೆ ಆಗುವ ಮೊಬಲಗನ್ನು ಡಿಪಾಜಿಟ್ ಯಿಡಬೇಕಲ್ಲದೆ ಹರಾಜು ಮಂಜೂರ್ಮಾಡಲ್ಪಟ್ಟು ನಂಗತಿ ಡೆಪ್ಯೂಟಿ ಕಮ್ಮಿಷನರವರಿಂದ ಕ್ರಯದಾರನಿಗೆ ತಿಳಿಸಲ್ಪಟ್ಟು ತಾರೀಖು ಮೊದಲು 7 ದಿವಸದವಳಗಾಗಿ ಕ್ರಯದ ವಟ್ಟುಮೊಬಲಗಿನ ಮೇಲೆ ರೂಪಾಯಿ 1ಕ್ಕೆ ವಂದಾಣಿಯಂತೆ ಆಗುವ ಲೋಕಲ್‌ಸೆಸ್ಸು ದೇವೀಲ್ ಬಾಕಿ ಕ್ರಯದ ಮೊಬಲಗನ್ನು ಪಾವತಿ ಮಾಡದಿದ್ದರೆ ಹಾಂಗೆ ಡಿಪಾಜಿಟ್ಟು ಯಿಟ್ಟ ಮೊಬಲಗು ಸರಕಾರಕ್ಕೆ ದಂಡವಾಗಿ ತೆಗದುಕೊಳ್ಳಲ್ಪಡುವದು ಹಾಂಗೆ ಡಿಪಾಜಿಟ್ಟು ಮೊಬಲಗು ಹಾಜರ್ಮಾಡದಿದ್ದರೂ, ಅಥವಾ ಬಾಕಿ ಕ್ರಯದ ಮೊಬಲಗು ಪಾವತಿ ಮಾಡದಿದ್ದರೂ ಪಕ್ಕುದಾರಿಯು ಅವಲ್ ಕ್ರಯದಾರನ ಖರ್ಚಿಗೂ ಮತ್ತು ನುಕ್ಸಾನಿಗೂ ವಳಪಟ್ಟುಪುನಹ ವಿಕ್ರಯಿಸಲ್ಪಡುವದು.

6. ಹರಾಜ್ ಷರತ್ತುಗಳು—

(a) ಹಿಡುವಳೀ ಜಮೀನಿನಲ್ಲಿ ಇರತಕ್ಕ ಕಲ್ಲುಗಳನ್ನು ತೆಗದುಕೊಳ್ಳಬೇಕಾದರೆ ಹಿಡುವಳ್‌ದಾರನ ಸಮ್ಮತಿಯನ್ನು ಪಡಿಯಬೇಕು ಜಮೀನ್ ಹಿಡುವಳೀದಾರನು ತನ್ನ ಕಲ್ಲುಗಳನ್ನು ಸ್ವಂತ ಪ್ರಯೋಜನಕ್ಕಾಗಿ ತೆಗದುಕೊಳ್ಳಲೂ ಕೂಡದು ಯಿಜಾರೇದಾರನಿಗೆ ಮಾರಬೇಕೇ ಹೊರ್ತು ಯಿತರ ಜನಗಳಿಗೆ ಮಾರಲೂಕೂಡದು.

(b) ಯಿಜಾರ್‌ದಾರನು ಹುಲ್ಲುಬನ್ನಿ ಯಿಜಾರಿದಾರರ ಚರಾವು ಹಕ್ಕಿನಲ್ಲಿ ಪ್ರವೇಸಿಸಕೂಡು.

(c) ಬಂಜರು ಜಮೀನುಗಳು ಸಾಗುವಳಿಟಗ್ಯೆ ದರಖಾಸ್ತು ಬಂದಲ್ಲಿ ಅಪ್ರಕಾರ ಸಾಗುವಳಿಗೆ ಕೊಟ್ಟುಬಿಡುವದಕ್ಕೆ ಕುರಂಗದ ಯಿಜಾರೇದಾರನು ಅಡ್ಡೀಜೇಳಕೂಡದು. ಆಂತಾ ಜಮೀನುಗಳಲ್ಲಿ ಕುರಂಗದಕಲ್ಲುಗಳನ್ನು ತೆಗದುಕೊಳ್ಳತಕ್ಕ ಹಕ್ಕು ಮಾತ್ರ ಯಿಜಾರೇದಾರನಿಗೆ ವೊಳದುಯಿರುತ್ತೆ.

(d) ಯಿಜಾರೇದಾರನು ಕಲ್ಲುಗಣಿಗೋಸ್ಕರ ಜಮೀನುಗಳನ್ನ ಆಗಿಯಕೂಡದು ಎಂದುವೇಳೆ ಹಾಗೆ ಆಗದಲ್ಲಿ, ಆ ಗುಂಡಿಗಳನ್ನು ತಕ್ಷಣ ಮುಚ್ಚಿಬಿಟ್ಟು ಸಾಗುವಳಿಗೆ ಜಮೀನು ಲಾಯಖು ಯಿರುವಹಾಗೆ ಮಾಡಬೇಕು.

ಬಿ. ಕೃಷ್ಣಯ್ಯಂಗಾರ್,
ಫಾರ್ ಡೆಪ್ಯೂಟಿ ಕಮ್ಮಿಷನರ್.

ಕಡೂರು ಡಿಸ್ಟ್ರಿಕ್ಟು.
ಪ್ರಕಟನೆ.

ಇದರ ಅಡಿ ಕಂಡ ಡಿಪೋಗಳಿಗೆ ಅದಕ್ಕೆ ಯದುರಾಗಿ ತಾಣಿಸಲ್ಪಟ್ಟ ಜಂಗ್ಲಿಗಳಿಂದ ನಾಟಾಗಳನ್ನೂ ಬೆಲಗುಗಳನ್ನೂ ಮತ್ತು ಕಿರಗಳುಗಳನ್ನೂ ಬರುವ 1890ನೇ ಮಾರ್ಚಿ 31ನೇ ತಾರೀಖು ವಳಗಾಗಿ ಜಮಾಯಿಸಿಕೊಡಲು ಇಷ್ಟವುಳ್ಳವರು ಟೆಂಡರ್‌ಯಾನೆ "ದರಪಾಸ್ತು" ಕೊಡಬಹುರು.

ಡಿಪೋ ಹೆಸರು.	ತರಹೆ.	ಜಮಾಯಿಸಿ ಕೊಡಬೇಕಾದಸಂಖೆ.	ಯಾವ ಜಂಗ್ಲಿಯಿಂದ ಜಮಾಯಿಸಿ ಕೊಡತಕ್ಕದ್ದು ವಗೈರೆ.
ಹಿಕ್ಕುವಳ್ಳೀ ಡಿಪೊ	ಕಳದ ವರುಷಗಳಲ್ಲಿ ಕಡದು ಬಿದ್ದ ಹೇರೆಕೊಂಬೆ ವಗೈರೆ ಸಾಗವಾನೀ ನಾಟಾಗಳು	200	ಲಕ್ಕುವಳ್ಳೀ ಡಿಪ್ಪೊ ಮತ್ತು ಮನ್ನಾಜಂಗ್ಲಿ
ಡಿಟೋ	ಹೊಸ ತ್ಯಾಗದ ನಾಟಾಗಳು	100	ಡಿಪೋ ಫಾರೆಸ್ಟ್ಸು ಇಲಾಖೆಯವರಿಂದ ನಿರ್ಮಾಣ ಮಾಡಲ್ಪಟ್ಟವುಗಳು
ಡಿಟೋ	ಮನ್ನಾಜಾತಿ ನಾಟಾ	150	ಡಿಟೋ ಡಿಟೋ
ಡಿಟೋ	ಕಾಡು ಜಾತಿ	50	ಡಿಟೋ ಡಿಟೋ
ತರೀಕೆರೇ ಡಿಪೊ	ತ್ಯಾಗದ ಪಲಗು	1000	ಹಾದೀಕೆರೇ ಸಾನ್ವಿಹಳ್ಳಿ ಮತ್ತು ಗೋಪಾಲಗುಡ್ಡದ ಜಂಗ್ಲಿ ಡಿಟೋ
ಡಿಟೋ	ಸಂಣ ಬಿದರು	100,000	ಉಲ್ಲಾಸೇ ಮನ್ನಾಜಂಗ್ಲಿಯ ತಿದ್ದರಹಳ್ಳೀ ಮತ್ತು ಗಂಗೂರ ಜಂಗ್ಲಿಗಳು
ಹೇಬ್ಬ ಟಂಪರಿ ಡಿಪೊ	ತ್ಯಾಗ	150	ಮುತ್ತೋಡಿ ಮತ್ತು ತೇಗೂರ ಗುಡ್ಡದ ಜಂಗ್ಲಿಗಳಲ್ಲಿ ಫಾರೆಸ್ಟ್ಸು ಇಲಾಖೆಯಿಂದ ನಿರ್ಮಾಣ ಮಾಡಿದವುಗಳು.
ಡಿಟೋ	ಮನ್ನಾಜಾತಿ	100	ಡಿಟೋ ಡಿಟೋ